# ಸೇವಾವಾಣಿ

## ಮಾಸಿಕ ಸುದ್ದಿಪತ್ರಿಕೆ - ಮೇ 2026



**ಆರ್ಬಿಟ್ ಸಂಸ್ಥೆ, ಹುಮನಾಬಾದ**
ಮತ್ತು **ಸೇವಾ ಸಂಗಮ ಸಂಸ್ಥೆ, ಕಲಬುರಗಿ**

# ಸೇವಾವಾಣಿ

## ಮಾಸಿಕ ಸುದ್ದಿಪತ್ರಿಕೆ - ಮೇ 2026

"ಸಮುದಾಯದ ಅಭಿವೃದ್ಧಿ, ಸಬಲೀಕರಣ ಮತ್ತು ಪರಿವರ್ತನೆಯ ಪಯಣ"












@Orbit Bidar @Orbitbidar1993 www.orbitbidar.in @orbithumnabad ORBIT Bidar

# ಅಧ್ಯಕ್ಷರ ಆಶೀರ್ವಚನ



**ಪ್ರಿಯ ಸಹೋದರ ಸಹೋದರಿಯರೇ,**

ಸಮಾಜದ ಸಮಗ್ರ ಅಭಿವೃದ್ಧಿ ಮತ್ತು ಮಾನವೀಯ ಮೌಲ್ಯಗಳ ಬೆಳವಣಿಗೆಯೇ ನಮ್ಮ ಸೇವೆಯ ಮುಖ್ಯ ಉದ್ದೇಶವಾಗಿದೆ. ಆರ್ಬಿಟ್ ಸಂಸ್ಥೆ ಮತ್ತು ಸೇವಾ ಸಂಗಮ ಸಂಸ್ಥೆಗಳು ಶಿಕ್ಷಣ, ಆರೋಗ್ಯ, ಮಹಿಳಾ ಸಬಲೀಕರಣ, ಮಕ್ಕಳ ಅಭಿವೃದ್ಧಿ, ಯುವಜನರ ಪ್ರಗತಿ ಹಾಗೂ ಸಮುದಾಯ ಅಭಿವೃದ್ಧಿ ಕ್ಷೇತ್ರಗಳಲ್ಲಿ ನಿರಂತರವಾಗಿ ಸೇವೆ ಸಲ್ಲಿಸುತ್ತಿರುವುದು ಸಂತೋಷದ ವಿಷಯವಾಗಿದೆ.

ಈ ಮಾಸಿಕ ಸುದ್ದಿಪತ್ರಿಕೆಯು ಕಳೆದ ತಿಂಗಳಲ್ಲಿ ಕೈಗೊಂಡ ವಿವಿಧ ಕರ್ಯಕ್ರಮಗಳು, ಸಾಧನೆಗಳು ಮತ್ತು ಜನರ ಜೀವನದಲ್ಲಿ ಉಂಟಾದ ಸಕಾರಾತ್ಮಕ ಬದಲಾವಣೆಗಳನ್ನು ಪರಿಚಯಿಸುತ್ತದೆ. ಸಮಾಜದ ಅಂಚಿನಲ್ಲಿರುವ ಜನರಿಗೆ ಆಶಾಕಿರಣವಾಗುವಂತಹ ಸೇವಾ ಕರ್ಯಗಳು ನಮ್ಮೆಲ್ಲರ ಸಹಭಾಗಿತ್ವದಿಂದ ಸಾಧ್ಯವಾಗುತ್ತಿವೆ.

ಈ ಸೇವಾ ಪಯಣದಲ್ಲಿ ತಮ್ಮ ಅಮೂಲ್ಯ ಸಹಕಾರ ನೀಡುತ್ತಿರುವ ಸಿಬ್ಬಂದಿ, ಸ್ವಯಂಸೇವಕರು, ದಾನಿಗಳು, ಸಹಭಾಗಿತ್ವ ಸಂಸ್ಥೆಗಳು ಹಾಗೂ ಸಮುದಾಯದ ಎಲ್ಲಾ ಸದಸ್ಯರಿಗೆ ನನ್ನ ಹೃತ್ಪರ್ವಕ ಅಭಿನಂದನೆಗಳು ಮತ್ತು ಕೃತಜ್ಞತೆಗಳು.

ನಮ್ಮ ಸೇವಾ ಕಾರ್ಯಗಳು ಇನ್ನಷ್ಟು ಜನರ ಜೀವನದಲ್ಲಿ ಆಶೆ, ಆತ್ಮವಿಶ್ವಾಸ ಮತ್ತು ಅಭಿವೃದ್ಧಿಯ ಬೆಳಕನ್ನು ಹರಡಲಿ ಎಂದು ಹಾರೈಸುತ್ತೇನೆ. ಸರ್ವಶಕ್ತ ದೇವರ ಆಶೀರ್ವಾದ ನಿಮ್ಮೆಲ್ಲರ ಮೇಲಿರಲಿ.

**ಸ್ನೇಹಪೂರ್ವಕವಾಗಿ,**

**ಅಧ್ಯಕ್ಷರು:**
ಪರಮ ಪೂಜ್ಯ ಡಾ. ರಾಬರ್ಟ್ ಮೈಕಲ್ ಮಿರಾಂದ
ಧರ್ಮಾಧ್ಯಕ್ಷರು, ಗುಲ್ಬರ್ಗ ಧರ್ಮಕ್ಷೇತ್ರ
ಅಧ್ಯಕ್ಷರು, ಆರ್ಬಿಟ್ ಸಂಸ್ಥೆ, ಹುಮನಾಬಾದ ಮತ್ತು ಸೇವಾ ಸಂಗಮ ಸಂಸ್ಥೆ, ಕಲಬುರಗಿ

# ನಿರ್ದೇಶಕರ ಸಂದೇಶ



## ಪ್ರಿಯ ಸ್ನೇಹಿತರೆ,

ಸೇವಾವಾಣಿ ಪತ್ರಿಕೆಯ ಮೂಲಕ ಆರ್ಬಿಟ್ ಸಂಸ್ಥೆ ಮತ್ತು ಸೇವಾ ಸಂಗಮ ಸಂಸ್ಥೆಗಳಲ್ಲಿ ನಡೆಯುತ್ತಿರುವ ವಿವಿಧ ಸೇವಾ ಚಟುವಟಿಕೆಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳಲು ಸಂತೋಷವಾಗುತ್ತಿದೆ. ಸಮಾಜದ ಅಗತ್ಯಗಳನ್ನು ಅರಿತು, ಮಾನವೀಯ ಮೌಲ್ಯಗಳ ಆಧಾರದ ಮೇಲೆ ನಾವು ನಮ್ಮ ಸೇವೆಯನ್ನು ನಿರಂತರವಾಗಿ ಮುಂದುವರಿಸುತ್ತಿದ್ದೇವೆ. ಮಾನಸಿಕ ಆರೋಗ್ಯ ಕಾರ್ಯಕ್ರಮ, ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ, ಮಕ್ಕಳ ಮನೆ ಕಾರ್ಯಕ್ರಮ, ಮಹಿಳಾ ಸಬಲೀಕರಣ  ಕಾರ್ಯಕ್ರಮ, ಕ್ಯಾನ್ಸರ್ ಜಾಗೃತಿ  ಕಾರ್ಯಕ್ರಮಗಳು ಹಾಗೂ ಇತರ ಸಾಮಾಜಿಕ ಅಭಿವೃದ್ಧಿ ಚಟುವಟಿಕೆಗಳು ನಮ್ಮ ಸಂಸ್ಥೆಗಳ ಮೂಲಕ ಪರಿಣಾಮಕಾರಿಯಾಗಿ ನಡೆಯುತ್ತಿವೆ. ಈ ಎಲ್ಲಾ  ಕಾರ್ಯಕ್ರಮಗಳ ಮೂಲಕ ಮಕ್ಕಳ, ಮಹಿಳೆಯರ ಮತ್ತು ಸಮಾಜದ ಅಗತ್ಯವಿರುವ ಜನರ ಜೀವನದಲ್ಲಿ ಉತ್ತಮ ಬದಲಾವಣೆ ತರಲು ನಾವು ಪ್ರಯತ್ನಿಸುತ್ತಿದ್ದೇವೆ.

ನಮ್ಮ ಸಂಸ್ಥೆಗಳ ವಿವಿಧ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆಯಲು ನಮ್ಮ ಸಿಬ್ಬಂದಿಯ ಸರ್ಪಣೆ, ಪರಿಶ್ರಮ ಮತ್ತು ಸೇವಾ ಮನೋಭಾವವೇ ಪ್ರಮುಖ ಶಕ್ತಿಯಾಗಿದೆ. ಮಕ್ಕಳೊಂದಿಗೆ, ಕುಟುಂಬಗಳೊಂದಿಗೆ ಮತ್ತು ಸಮುದಾಯದೊಂದಿಗೆ ನಮ್ಮ ಸಿಬ್ಬಂದಿ ತೋರಿಸುತ್ತಿರುವ ಕಾಳಜಿ, ಜವಾಬ್ದಾರಿ ಮತ್ತು ಬದ್ಧತೆ ನಿಜವಾಗಿಯೂ ಶ್ಲಾಘನೀಯವಾಗಿದೆ. ಸಂಸ್ಥೆಯ ಕರ್ಯಗಳಿಗೆ ನಿರಂತರವಾಗಿ ಬೆಂಬಲ ನೀಡುತ್ತಿರುವ ಎಲ್ಲಾ ಸಿಬ್ಬಂದಿ ಸದಸ್ಯರು, ಹಿತೈಷಿಗಳು ಮತ್ತು ಎಲ್ಲಾ ಬೆಂಬಲಿಗರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಮುಂದಿನ ದಿನಗಳಲ್ಲಿಯೂ ಆರ್ಬಿಟ್ ಸಂಸ್ಥೆ ಮತ್ತು ಸೇವಾ ಸಂಗಮ ಸಂಸ್ಥೆಗಳು ಸಮಾಜದ ಒಳಿತಿಗಾಗಿ ಹೊಸ ಉತ್ಸಾಹ ಮತ್ತು ಬದ್ಧತೆಯೊಂದಿಗೆ ಸೇವೆಯನ್ನು ಮುಂದುವರಿಸಲಿವೆ. ನಿಮ್ಮೆಲ್ಲರ ಪ್ರಾರ್ಥನೆ, ಸಹಕಾರ ಮತ್ತು ಪ್ರೋತ್ಸಾಹ ನಮ್ಮ ಸೇವಾ ಪಯಣಕ್ಕೆ ಹೆಚ್ಚಿನ ಶಕ್ತಿಯನ್ನು ನೀಡುತ್ತದೆ. ಒಟ್ಟಾಗಿ ನಾವು ಸಮಾಜದಲ್ಲಿ ಸಕಾರಾತ್ಮಕ ಬದಲಾವಣೆಯನ್ನು ತರಲು ಪ್ರಯತ್ನಿಸೋಣ. ಎಲ್ಲರಿಗೂ ಧನ್ಯವಾದಗಳು.

ಫಾದರ್ ವಿಕ್ಟರ್ ವಾಸ್

**ನಿರ್ದೇಶಕರು**

**ಆರ್ಬಿಟ್ ಸಂಸ್ಥೆ, ಹುಮನಾಬಾದ**

# ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಜಾಗೃತಿ ಕಾರ್ಯಕ್ರಮ



**"ವಿಶೇಷ ಅಗತ್ಯಗಳಿರುವ ಮಕ್ಕಳನ್ನು ಶೀಘ್ರ ಗುರುತಿಸಿ, ಸೂಕ್ತ ಸೇವೆಗಳಿಗೆ ಸಂಪರ್ಕಿಸುವ ಮೂಲಕ ಅವರ ಜೀವನದಲ್ಲಿ ಸಕಾರಾತ್ಮಕ ಬದಲಾವಣೆ ತರಬಹುದು."**

20 ಮೇ 2026 ರಂದು ಬಸವಕಲ್ಯಾಣ ತಾಲೂಕಿನ ಪಂಡರಗೇರಾ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆಯ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮದಡಿ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದಲ್ಲಿ ಬೆಳವಣಿಗೆಯಲ್ಲಿ ಕುಂಠಿತತೆ ಹೊಂದಿರುವ ಹಾಗೂ ವಿಶೇಷ ಅಗತ್ಯಗಳಿರುವ ಮಕ್ಕಳ ಗುರುತಿಸುವಿಕೆ, ಅವರ ಅಭಿವೃದ್ಧಿಗಾಗಿ ಆರ್ಬಿಟ್ ಸಂಸ್ಥೆಯ ಕೇಂದ್ರ ಮತ್ತು ಉಪಕೇಂದ್ರಗಳಲ್ಲಿ ನಡೆಸಲಾಗುತ್ತಿರುವ ಚಟುವಟಿಕೆಗಳು ಹಾಗೂ ಲಭ್ಯವಿರುವ ಸೇವೆಗಳ ಕುರಿತು ಮಾಹಿತಿ ನೀಡಲಾಯಿತು. ಗ್ರಾಮದಲ್ಲಿ ಇಂತಹ ಮಕ್ಕಳನ್ನು ಕಂಡುಬಂದಲ್ಲಿ ಆರ್ಬಿಟ್ ಸಂಸ್ಥೆಗೆ ಮಾಹಿತಿ ನೀಡುವಂತೆ ಮನವಿ ಮಾಡಲಾಯಿತು. ವಿಶೇಷ ಚೇತನ ಮಕ್ಕಳು ಯಾವುದೇ ರೀತಿಯಲ್ಲಿ ಕಡಿಮೆ ಇಲ್ಲ ಎಂಬ ಅರಿವು ಮೂಡಿಸಿ, ಅವರನ್ನು ಪ್ರೋತ್ಸಾಹಿಸಿ ಮುಖ್ಯವಾಹಿನಿಗೆ ತರಲು ಪೋಷಕರು ಶ್ರಮವಹಿಸಬೇಕೆಂದು ತಿಳಿಸಲಾಯಿತು. ಅಲ್ಲದೆ, ಮಕ್ಕಳಿಗೆ ಸರ್ಕಾರದಿಂದ ದೊರೆಯುವ ವಿವಿಧ ಸೌಲಭ್ಯಗಳನ್ನು ಪಡೆಯಲು ಸಂಸ್ಥೆಯಿಂದ ಅಗತ್ಯ ನೆರವು ನೀಡಲಾಗುವುದು ಎಂದು ತಿಳಿಸಲಾಯಿತು. ಈ ಕಾರ್ಯಕ್ರಮದಲ್ಲಿ ಅಂಗನವಾಡಿ ಕಾರ್ಯಕರ್ತೆಯರು, ಗ್ರಾಮಸ್ಥರು ಹಾಗೂ ಸದಸ್ಯರು ಭಾಗವಹಿಸಿದ್ದು, ಒಟ್ಟು 18 ಜನರು ಉಪಸ್ಥಿತರಿದ್ದರು.

# ಬೆಳವಣಿಗೆಯಲ್ಲಿ ಕುಂಠಿತ ಮಕ್ಕಳಿಗೆ ಕೇಂದ್ರ ಆಧಾರಿತ ಚಟುವಟಿಕೆ

20 ಮೇ 2026 ರಂದು ಹುಮನಾಬಾದ್ ತಾಲೂಕಿನ ಹೊರವಲಯದಲ್ಲಿರುವ ಆರ್ಬಿಟ್ ಸಂಸ್ಥೆಯ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆ ಅಡಿಯಲ್ಲಿ ಬೆಳವಣಿಗೆಯಲ್ಲಿ ಕುಂಠಿತತೆ ಹೊಂದಿರುವ ಮಕ್ಕಳಿಗೆ ಕೇಂದ್ರ ಆಧಾರಿತ ಚಟುವಟಿಕೆಗಳನ್ನು ನಡೆಸಲಾಯಿತು. ಚಟುವಟಿಕೆಗಳ ಭಾಗವಾಗಿ ಮಕ್ಕಳಿಗೆ ಬಣ್ಣಬಣ್ಣದ ವಸ್ತುಗಳನ್ನು ಗುರುತಿಸುವುದು, ಹಣ್ಣು ಹಾಗೂ ತರಕಾರಿಗಳ ಹೆಸರುಗಳನ್ನು ಉಚ್ಚರಿಸುವುದು ಮತ್ತು ದೈನಂದಿನ ಬಳಕೆಯ ಪದಗಳನ್ನು ಸ್ಪಷ್ಟವಾಗಿ ಮಾತನಾಡುವ ತರಬೇತಿ ನೀಡಲಾಯಿತು. ಅಲ್ಲದೆ, ಮಕ್ಕಳ ದೈಹಿಕ ಬೆಳವಣಿಗೆಗಾಗಿ ಕುಳಿತುಕೊಳ್ಳುವುದು, ನಿಲ್ಲುವುದು ಹಾಗೂ ಗೋಡೆಯ ಸಹಾಯದಿಂದ ನಡೆಯುವ ಚಟುವಟಿಕೆಗಳನ್ನು ಮಾಡಿಸಲಾಯಿತು. ಪೋಷಕರಿಗೆ ಮನೆಯಲ್ಲಿ ನಿರಂತರವಾಗಿ ಚಟುವಟಿಕೆಗಳನ್ನು ನಡೆಸುವಂತೆ ಹಾಗೂ ಮಕ್ಕಳಿಗೆ ಪೌಷ್ಟಿಕ ಆಹಾರವನ್ನು ಸಮಯಕ್ಕೆ ಸರಿಯಾಗಿ ನೀಡುವಂತೆ ಸಲಹೆ ನೀಡಲಾಯಿತು. ಈ ಚಟುವಟಿಕೆಗಳಿಂದ ಮಕ್ಕಳ ದೈಹಿಕ ಹಾಗೂ ಬೌದ್ಧಿಕ ಬೆಳವಣಿಗೆಯಲ್ಲಿ ಸಕಾರಾತ್ಮಕ ಬದಲಾವಣೆ ಕಾಣಬಹುದು ಎಂದು ತಿಳಿಸಲಾಯಿತು. ಕೇಂದ್ರದಲ್ಲಿ ಒಟ್ಟು 7 ಮಕ್ಕಳಿಗೆ ಕೇಂದ್ರ ಆಧಾರಿತ ಚಟುವಟಿಕೆಗಳನ್ನು ನಡೆಸಲಾಯಿತು.

**"ನಿರಂತರ ಚಟುವಟಿಕೆ ಮತ್ತು ಪೋಷಕರ ಸಹಕಾರವು ಮಕ್ಕಳ ಬೆಳವಣಿಗೆಯಲ್ಲಿ ಮಹತ್ವದ ಬದಲಾವಣೆ ತರಬಲ್ಲದು."**



# “ಮಾನಸಿಕ ಅಸ್ವಸ್ಥರ ಸಮುದಾಯ ಆಧಾರಿತ ಪುನರ್ವಸತಿ ಕಾರ್ಯಕ್ರಮ”

12 ಮೇ 2026 ರಂದು ಹುಮನಾಬಾದ್ ತಾಲೂಕಿನ ಮುಸ್ತಾಪುರ ಗ್ರಾಮದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಆರೋಗ್ಯ ತಪಾಸಣೆಗೆ ಆಗಮಿಸಿದ್ದ ಗರ್ಭಿಣಿ ಮಹಿಳೆಯರಿಗೆ ಕ್ಯಾನ್ಸರ್ ಕುರಿತು ಜಾಗೃತಿ ಮೂಡಿಸಲಾಯಿತು. ಕಾರ್ಯಕ್ರಮದಲ್ಲಿ ತಂಬಾಕು, ಗುಟ್ಕಾ ಹಾಗೂ ಧೂಮಪಾನದ ದುಷ್ಪರಿಣಾಮಗಳು, ಆರೋಗ್ಯಕರ ಜೀವನಶೈಲಿಯ ಮಹತ್ವ ಮತ್ತು ಕ್ಯಾನ್ಸರ್‌ನ ಆರಂಭಿಕ ಲಕ್ಷಣಗಳ ಕುರಿತು ಮಾಹಿತಿ ನೀಡಲಾಯಿತು. ಬಾಯಿ ಅಥವಾ ನಾಲಿಗೆಯಲ್ಲಿ ದೀರ್ಘಕಾಲದ ಹುಣ್ಣು, ಮೂತ್ರದಲ್ಲಿ ರಕ್ತ ಕಾಣಿಸಿಕೊಳ್ಳುವುದು, ಗಂಟಲು, ಚರ್ಮ ಹಾಗೂ ಥೈರಾಯ್ಡ್ ಸಂಬಂಧಿತ ಅಸಾಮಾನ್ಯ ಬದಲಾವಣೆಗಳು ಕ್ಯಾನ್ಸರ್‌ನ ಲಕ್ಷಣಗಳಾಗಿರಬಹುದು ಎಂದು ತಿಳಿಸಿ, ನಿಯಮಿತ ಆರೋಗ್ಯ ತಪಾಸಣೆಯ ಅಗತ್ಯತೆಯ ಬಗ್ಗೆ ಅರಿವು ಮೂಡಿಸಲಾಯಿತು.



## "ಆರೋಗ್ಯದ ಬಗ್ಗೆ ಕಾಳಜಿ ಮತ್ತು ಸಮಯೋಚಿತ ತಪಾಸಣೆ ಕ್ಯಾನ್ಸರ್ ತಡೆಗೆ ಮೊದಲ ಹೆಜ್ಜೆ."

## "ಕ್ಯಾನ್ಸರ್‌ನ್ನು ಬೇಗ ಗುರುತಿಸಿದರೆ ಪರಿಣಾಮಕಾರಿ ಚಿಕಿತ್ಸೆ ಸಾಧ್ಯ."

18 ಮೇ 2026 ರಂದು ಹುಮನಾಬಾದ್ ತಾಲೂಕಿನ ಸಿತಾಳಗೇರಾ ಗ್ರಾಮದಲ್ಲಿ ನರೇಗಾ ಕಾರ್ಮಿಕರಿಗೆ ಆರ್ಬಿಟ್ ಸಂಸ್ಥೆಯ ವತಿಯಿಂದ ಕ್ಯಾನ್ಸರ್ ಕುರಿತು ಜಾಗೃತಿ ಕಾರ್ಯಕ್ರಮ ನಡೆಸಲಾಯಿತು. ಕಾರ್ಯಕ್ರಮದಲ್ಲಿ ಕ್ಯಾನ್ಸರ್‌ನ ವಿವಿಧ ಲಕ್ಷಣಗಳು, ಆರಂಭಿಕ ಹಂತದಲ್ಲೇ ರೋಗವನ್ನು ಗುರುತಿಸುವ ಮಹತ್ವ ಹಾಗೂ ಸಮಯಕ್ಕೆ ಸರಿಯಾಗಿ ವೈದ್ಯರ ಸಲಹೆ ಪಡೆಯುವ ಅಗತ್ಯತೆಯ ಬಗ್ಗೆ ಮಾಹಿತಿ ನೀಡಲಾಯಿತು. ಆರೋಗ್ಯದ ಬಗ್ಗೆ ನಿರ್ಲಕ್ಷ್ಯ ವಹಿಸದೆ, ಯಾವುದೇ ಅನುಮಾನಾಸ್ಪದ ಲಕ್ಷಣಗಳು ಕಂಡುಬಂದಲ್ಲಿ ತಕ್ಷಣ ವೈದ್ಯರನ್ನು ಸಂಪರ್ಕಿಸುವಂತೆ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ಕಂಠಿ ಅವರು ತಿಳಿಸಿದರು.





29 ಮೇ 2026 ರಂದು ಹುಮನಾಬಾದ್ ತಾಲೂಕಿನ ಸೋನಕೇರಾ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ಅಜೀಂ ಪ್ರೇಮ್‌ಜೀ ಫೌಂಡೇಶನ್‌ನ ಸಂಯುಕ್ತ ಸಹಯೋಗದಲ್ಲಿ ಕನಕದಾಸ ವಿಶೇಷ ಚೇತನರ ಸಂಘದ ಸಭೆ ಯಶಸ್ವಿಯಾಗಿ ನಡೆಯಿತು. ಸಭೆಯಲ್ಲಿ ಅಂಗವಿಕಲರ ಆರೋಗ್ಯ, ಶಿಕ್ಷಣ, ಸಾರಿಗೆ ಹಾಗೂ ಇತರೆ ಮೂಲಭೂತ ಸೌಲಭ್ಯಗಳ ಕುರಿತು ಚರ್ಚೆ ನಡೆಸಲಾಯಿತು. ಅಲ್ಲದೆ, ಯುಡಿಐಡಿ (UDID) ಕಾರ್ಡ್, ಅಂಗವಿಕಲ ಪಿಂಚಣಿ, ಸಹಾಯಕ ಉಪಕರಣಗಳ ವಿತರಣೆ, ಚಿಕಿತ್ಸೆ ಮತ್ತು ಪುನರ್ವಸತಿ ಸೇವೆಗಳ ಕುರಿತು ಮಾಹಿತಿ ನೀಡಲಾಯಿತು. ಪೋಷಕರಿಗೆ ಮಕ್ಕಳ ಆರೈಕೆ, ಶಿಕ್ಷಣ, ಥೆರಪಿ ಹಾಗೂ ದೈನಂದಿನ ಚಟುವಟಿಕೆಗಳ ಕುರಿತು ಮಾರ್ಗದರ್ಶನ ನೀಡಲಾಯಿತು. ಸಭೆಯಲ್ಲಿ ಒಟ್ಟು 4 ಫಲಾನುಭವಿಗಳು ಭಾಗವಹಿಸಿದರು.

# "ಮಹಿಳಾ ಸಬಲೀಕರಣ ಕಾರ್ಯಕ್ರಮ"

18 ಮೇ 2026 ರಂದು ಗೋರ್ನಹಳ್ಳಿ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತೆ ಶ್ರೀಮತಿ ರೋಸ್ಮೆರಿ ಅವರು ಶಾಂತಿ ಸಂಘದ ಮಹಿಳೆಯರಿಗೆ ಆರೋಗ್ಯ ಕುರಿತು ತರಬೇತಿ ನೀಡಿದರು. ತರಬೇತಿಯಲ್ಲಿ ಹಾಲಿನ ಪೌಷ್ಟಿಕ ಮಹತ್ವ, ಅದರಲ್ಲಿರುವ ಪ್ರೋಟೀನ್, ವಿಟಮಿನ್‌ಗಳು, ಕ್ಯಾಲ್ಸಿಯಂ ಹಾಗೂ ಇತರೆ ಪೋಷಕಾಂಶಗಳ ಕುರಿತು ಮಾಹಿತಿ ನೀಡಲಾಯಿತು. ಹಾಲಿನ ನಿಯಮಿತ ಸೇವನೆಯು ಎಲುಬುಗಳ ಬಲವರ್ಧನೆ, ದೈಹಿಕ ಆರೋಗ್ಯ ಮತ್ತು ರೋಗನಿರೋಧಕ ಶಕ್ತಿ ಹೆಚ್ಚಿಸಲು ಸಹಕಾರಿಯಾಗುತ್ತದೆ ಎಂದು ತಿಳಿಸಲಾಯಿತು.

## "ಪೌಷ್ಟಿಕ ಆಹಾರ ಉತ್ತಮ ಆರೋಗ್ಯದ ಅಡಿಪಾಯವಾಗಿದೆ."



# ಸ್ವ-ಸಹಾಯ ಸಂಘ ಮಹಿಳೆಯರಿಗೆ ನಾಯಕತ್ವ ತರಬೇತಿ

05 ಮೇ 2026 ರಂದು ಔರಾದ್ ತಾಲೂಕಿನ ಉಜಿನಿ ಗ್ರಾಮದಲ್ಲಿ ಸ್ವ-ಸಹಾಯ ಸಂಘದ ಮಹಿಳೆಯರಿಗಾಗಿ ನಾಯಕತ್ವ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಕಾರ್ಯಕ್ರಮದಲ್ಲಿ ಮಹಿಳೆಯರಲ್ಲಿ ನಾಯಕತ್ವ ಗುಣಗಳು, ಆತ್ಮವಿಶ್ವಾಸ, ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯ ಹಾಗೂ ತಂಡದೊಂದಿಗೆ ಕಾರ್ಯನಿರ್ವಹಿಸುವ ಕೌಶಲ್ಯಗಳನ್ನು ಬೆಳೆಸುವ ಕುರಿತು ತರಬೇತಿ ನೀಡಲಾಯಿತು. ಸಮುದಾಯದ ಅಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರ ಮತ್ತು ಸಕ್ರಿಯ ಭಾಗವಹಿಸುವಿಕೆಯ ಮಹತ್ವವನ್ನು ವಿವರಿಸಲಾಯಿತು. ಕಾರ್ಯಕ್ರಮದಲ್ಲಿ 15 ಸ್ವ-ಸಹಾಯ ಸಂಘದ ಮಹಿಳೆಯರು ಭಾಗವಹಿಸಿದರು.

## "ಮಹಿಳೆಯರ ನಾಯಕತ್ವ ಸಮಾಜದ ಸಬಲೀಕರಣಕ್ಕೆ ಶಕ್ತಿಯುತ ಅಡಿಪಾಯವಾಗಿದೆ."



# ಲಿಂಗ ಸಮಾನತೆ ಕುರಿತು ತರಬೇತಿ

11 ಮೇ 2026 ರಂದು ಹುಮನಾಬಾದ್ ತಾಲೂಕಿನ ದುಮನಸೂರ್ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆಯ ಮಹಿಳಾ ಸಬಲೀಕರಣ ಯೋಜನೆಯಡಿ ಸಂಜನಾ ಮಹಾಸಂಘದ ಸದಸ್ಯರಿಗೆ ಲಿಂಗ ಸಮಾನತೆ ಮತ್ತು ನ್ಯಾಯ ಕುರಿತು ತರಬೇತಿ ನೀಡಲಾಯಿತು. ಕಾರ್ಯಕ್ರಮದಲ್ಲಿ ಗಂಡು ಮತ್ತು ಹೆಣ್ಣು ಇಬ್ಬರೂ ಸಮಾನರು ಎಂಬ ಸಂದೇಶವನ್ನು ತಿಳಿಸಿ, ಕುಟುಂಬ ಮತ್ತು ಸಮಾಜದಲ್ಲಿ ಲಿಂಗ ಆಧಾರಿತ ತಾರತಮ್ಯವನ್ನು ನಿವಾರಿಸುವ ಅಗತ್ಯತೆಯ ಕುರಿತು ಅರಿವು ಮೂಡಿಸಲಾಯಿತು. ಮಕ್ಕಳಲ್ಲಿ ಸಮಾನತೆಯ ಮೌಲ್ಯಗಳನ್ನು ಬೆಳೆಸುವುದು ಹಾಗೂ ಗಂಡು-ಹೆಣ್ಣು ಎಂಬ ಭೇದಭಾವವಿಲ್ಲದೆ ಅವಕಾಶಗಳನ್ನು ಒದಗಿಸುವುದು ಪೋಷಕರ ಜವಾಬ್ದಾರಿಯಾಗಿದೆ ಎಂದು ತಿಳಿಸಲಾಯಿತು. ಕಾರ್ಯಕ್ರಮದಲ್ಲಿ 25 ಸದಸ್ಯರು ಭಾಗವಹಿಸಿದರು.




**"ಗಂಡು-ಹೆಣ್ಣು ಎಂಬ ಭೇದವಿಲ್ಲ; ಸಮಾನತೆಯೇ ಸದೃಢ ಸಮಾಜದ ಅಡಿಪಾಯ."**

# ಅಕ್ಕಮಹಾದೇವಿ ಹಾಗೂ ಆತ್ಮಜ್ಯೋತಿ ಮಹಾಸಂಘದ ಸಭೆ

25 ಮೇ 2026 ರಂದು ಭಾಲ್ಕಿ ತಾಲೂಕಿನ ಹುಣಜಿ ಗ್ರಾಮದಲ್ಲಿ ಅಕ್ಕಮಹಾದೇವಿ ಹಾಗೂ ಆತ್ಮಜ್ಯೋತಿ ಮಹಾಸಂಘದ ಸಭೆ ನಡೆಯಿತು. ಸಭೆಯಲ್ಲಿ ಮಹಾಸಂಘದ ಪರಿಕಲ್ಪನೆ, ಉದ್ದೇಶಗಳು ಹಾಗೂ ಬಲವರ್ಧನೆಯ ಕುರಿತು ತರಬೇತಿ ನೀಡಲಾಯಿತು. ಐದು ಅಥವಾ ಅದಕ್ಕಿಂತ ಹೆಚ್ಚಿನ ಸ್ವ-ಸಹಾಯ ಸಂಘಗಳು ಒಟ್ಟಾಗಿ ಮಹಾಸಂಘವನ್ನು ರಚಿಸುತ್ತವೆ ಹಾಗೂ ಸಂಘಗಳಲ್ಲಿ ಬಗೆಹರಿಯದ ಸಮಸ್ಯೆಗಳನ್ನು ಮಹಾಸಂಘದ ಮಟ್ಟದಲ್ಲಿ ಚರ್ಚಿಸಿ ಪರಿಹರಿಸಿಕೊಳ್ಳುವುದು ಅದರ ಪ್ರಮುಖ ಉದ್ದೇಶವಾಗಿದೆ ಎಂದು ವಿವರಿಸಲಾಯಿತು. ಸದಸ್ಯರು ಗ್ರಾಮದಲ್ಲಿನ ಸಮಸ್ಯೆಗಳನ್ನು ಮಹಾಸಂಘದ ಮೂಲಕ ಚರ್ಚಿಸಿ ಪರಿಹಾರ ಕಂಡುಕೊಳ್ಳುವ ಸಂಕಲ್ಪ ವ್ಯಕ್ತಪಡಿಸಿದರು. ಸಭೆಯಲ್ಲಿ ಆತ್ಮಜ್ಯೋತಿ ಮಹಾಸಂಘದ 15 ಸದಸ್ಯರು ಭಾಗವಹಿಸಿದ್ದರು.




**"ಒಗ್ಗಟ್ಟಿನ ಶಕ್ತಿಯೇ ಮಹಾಸಂಘದ ಬಲ; ಸಮಸ್ಯೆಗಳ ಪರಿಹಾರಕ್ಕೆ ಸಮೂಹ ಚರ್ಚೆ ಅಗತ್ಯ."**

# ಜನಶಕ್ತಿ ತಾಲೂಕು ಒಕ್ಕೂಟದ ಸಭೆ

16 ಮೇ 2026 ರಂದು ಆರ್ಬಿಟ್ ಸಂಸ್ಥೆ, ಹುಮನಾಬಾದ್‌ನಲ್ಲಿ ಜನಶಕ್ತಿ ತಾಲೂಕು ಒಕ್ಕೂಟದ ಸಭೆಯನ್ನು ಆಯೋಜಿಸಲಾಯಿತು. ಸಭೆಯಲ್ಲಿ ಒಕ್ಕೂಟದ 12 ಸದಸ್ಯರು ಭಾಗವಹಿಸಿದ್ದರು. ಮಹಿಳಾ ಸಬಲೀಕರಣ ಯೋಜನೆಯ ಸಂಯೋಜಕಿ ಶ್ರೀಮತಿ ನಿರ್ಮಲಾ ಅವರು ಒಕ್ಕೂಟದ ಬಲವರ್ಧನೆಯ ಕುರಿತು ಮಾಹಿತಿ ನೀಡುತ್ತಾ, ಮಹಾಸಂಘ ಮತ್ತು ಒಕ್ಕೂಟಗಳ ತಳಮಟ್ಟದ ಸಕ್ರಿಯ ಭಾಗವಹಿಸುವಿಕೆಯಿಂದ ಸಂಘಟನೆಗಳನ್ನು ಬಲಪಡಿಸಬಹುದು ಎಂದು ತಿಳಿಸಿದರು. ಪದಾಧಿಕಾರಿಗಳು ನಿಯಮಿತವಾಗಿ ಸಭೆಗಳಲ್ಲಿ ಭಾಗವಹಿಸುವುದು, ನಿರಂತರ ಸಭೆಗಳನ್ನು ನಡೆಸುವುದು ಹಾಗೂ ಪ್ರಚಲಿತ ವಿಷಯಗಳ ಕುರಿತು ಚರ್ಚಿಸಿ ಕ್ರಮ ಕೈಗೊಳ್ಳುವುದು ಒಕ್ಕೂಟದ ಅಭಿವೃದ್ಧಿಗೆ ಅಗತ್ಯವೆಂದು ವಿವರಿಸಲಾಯಿತು.

**"ನಿಯಮಿತ ಸಭೆಗಳು ಮತ್ತು ಸಕ್ರಿಯ ಭಾಗವಹಿಸುವಿಕೆಯೇ ಬಲಿಷ್ಠ ಒಕ್ಕೂಟದ ಅಡಿಪಾಯ."**






## ಹಳ್ಳಿಖೇಡ್ ಬಿ ಗ್ರಾಮದಲ್ಲಿ ತಾಯಂದಿರ ದಿನಾಚರಣೆ

18 ಮೇ 2026 ರಂದು ಹಳ್ಳಿಖೇಡ್ ಬಿ ಗ್ರಾಮದಲ್ಲಿ ಮಹಿಳಾ ಸಬಲೀಕರಣ ಯೋಜನೆಯ ವತಿಯಿಂದ ತಾಯಂದಿರ ದಿನಾಚರಣೆಯನ್ನು ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಮಹಿಳಾ ಸಬಲೀಕರಣ ಯೋಜನೆಯ ಸಂಯೋಜಕಿ ಶ್ರೀಮತಿ ನಿರ್ಮಲಾ ಅವರು ತಾಯಂದಿರ ದಿನದ ಮಹತ್ವವನ್ನು ವಿವರಿಸಿ, ತಾಯಿಯು ಕುಟುಂಬದ ಮೊದಲ ಗುರು ಹಾಗೂ ಕುಟುಂಬದ ಆಧಾರಸ್ತಂಭವಾಗಿದ್ದು, ಮಕ್ಕಳ ಲಾಲನೆ-ಪಾಲನೆ, ಆರೈಕೆ ಮತ್ತು ಮೌಲ್ಯಗಳ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸುತ್ತಾಳೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಭಾಗವಹಿಸಿದ ಮಹಿಳೆಯರು ತಾಯಂದಿರ ದಿನದ ಮಹತ್ವವನ್ನು ಅರಿತುಕೊಂಡು ಸಂಭ್ರಮದಿಂದ ಆಚರಣೆಯಲ್ಲಿ ಪಾಲ್ಗೊಂಡರು.

## “ಮಾನಸಿಕ ಅಸ್ವಸ್ಥರ ಸಮುದಾಯ ಆಧಾರಿತ ಪುನರ್ವಸತಿ ಕಾರ್ಯಕ್ರಮ” ನವಜೀವನ (ಎಲ್ ಎಲ್ ಎಲ್ ಎಫ್)

02 ಮೇ 2026 ರಂದು ಬೀದರ್ ತಾಲೂಕಿನ ಸುಲ್ತಾಪುರ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆಯ ನವಜೀವನ ಕಾರ್ಯಕ್ರಮದಡಿ ಮಾನಸಿಕ ಅಸ್ವಸ್ಥರ ಪಾಲಕ-ಪೋಷಕರ ಸಭೆಯನ್ನು ಆಯೋಜಿಸಲಾಯಿತು. ಸಭೆಯಲ್ಲಿ ಫಲಾನುಭವಿಗಳ ಆರೋಗ್ಯ ಸ್ಥಿತಿಯ ಕುರಿತು ಚರ್ಚಿಸಿ, ಆರೋಗ್ಯದ ಮಹತ್ವ ಹಾಗೂ ಆತ್ಮವಿಶ್ವಾಸದಿಂದ ಸಮಾಜದಲ್ಲಿ ಬದುಕುವ ಅಗತ್ಯತೆಯ ಬಗ್ಗೆ ಅರಿವು ಮೂಡಿಸಲಾಯಿತು. ನಿಯಮಿತವಾಗಿ ಔಷಧಿಗಳನ್ನು ಸೇವಿಸುವುದು, ದಿನನಿತ್ಯದ ಚಟುವಟಿಕೆಗಳನ್ನು ಸ್ವತಃ ನಿರ್ವಹಿಸಲು ಪ್ರೋತ್ಸಾಹಿಸುವುದು ಹಾಗೂ ಸರ್ಕಾರಿ ಸೌಲಭ್ಯಗಳು ಮತ್ತು ದಾಖಲೆಗಳ ಮಹತ್ವದ ಕುರಿತು ಮಾಹಿತಿ ನೀಡಲಾಯಿತು. ಯುಡಿಐಡಿ (UDID) ಕಾರ್ಡ್, ಮಾಸಾಶನ ಮತ್ತು ಗ್ರಾಮ ಪಂಚಾಯಿತಿಯ 5% ಅನುದಾನ ಸೇರಿದಂತೆ ವಿವಿಧ ಸೌಲಭ್ಯಗಳ ಕುರಿತು ಮಾರ್ಗದರ್ಶನ ನೀಡಲಾಯಿತು. ಸಭೆಯಲ್ಲಿ ಒಟ್ಟು 6 ಜನರು ಭಾಗವಹಿಸಿದ್ದರು.



# ಛತ್ರಪತಿ ಶಿವಾಜಿ ಆರೈಕೆದಾರರ ಸಭೆ

19 ಮೇ 2026 ರಂದು ಬೀದರ್ ತಾಲೂಕಿನ ಚಾಂಬೋಳ ಗ್ರಾಮದಲ್ಲಿ ಛತ್ರಪತಿ ಶಿವಾಜಿ ಆರೈಕೆದಾರರ ಸಭೆಯನ್ನು ಆಯೋಜಿಸಲಾಯಿತು. ಸಭೆಯಲ್ಲಿ ಭಾಗವಹಿಸಿದ ಎಲ್ಲಾ ಆರೈಕೆದಾರರ ಆರೋಗ್ಯ ಕ್ಷೇಮ ವಿಚಾರಿಸಲಾಯಿತು. ಸಭೆಯ ಮುಖ್ಯ ಉದ್ದೇಶವಾಗಿ ಒಗ್ಗಟ್ಟಿನಿಂದ ಕಾರ್ಯನಿರ್ವಹಣೆ, ಪರಸ್ಪರ ಬೆಂಬಲ, ಅನುಭವ ಹಂಚಿಕೆ ಹಾಗೂ ಮಾನಸಿಕ ಅಸ್ವಸ್ಥರ ಆರೈಕೆ ಕುರಿತು ಜಾಗೃತಿ ಮೂಡಿಸಲಾಯಿತು. ಮಾನಸಿಕ ಅಸ್ವಸ್ಥರನ್ನು ನೋಡಿಕೊಳ್ಳುವ ವಿಧಾನ, ಮಾನಸಿಕ ಆರೋಗ್ಯ ಜಾಗೃತಿ, ಆರೈಕೆದಾರರ ಸಮಸ್ಯೆಗಳು, ಸರ್ಕಾರಿ ಸೌಲಭ್ಯಗಳ ಮಾಹಿತಿ ಮತ್ತು ಕುಟುಂಬದ ಬೆಂಬಲದ ಮಹತ್ವದ ಕುರಿತು ಚರ್ಚೆ ನಡೆಯಿತು. ಸಭೆಯಲ್ಲಿ ಒಟ್ಟು 6 ಜನರು ಭಾಗವಹಿಸಿದ್ದರು.



**"ಒಗ್ಗಟ್ಟು, ಅನುಭವ ಹಂಚಿಕೆ ಮತ್ತು ಪರಸ್ಪರ ಬೆಂಬಲವೇ ಆರೈಕೆದಾರರ ಶಕ್ತಿಯ ಮೂಲವಾಗಿದೆ."**

# ಮಾನಸಿಕ ಸಾಮಾಜಿಕ ಶಿಕ್ಷಣ ತರಬೇತಿ ಕಾರ್ಯಕ್ರಮ

22 ಮೇ 2026 ರಂದು ಆರ್ಬಿಟ್ ಸಂಸ್ಥೆ ಹಾಗೂ ಎಲ್‌ಎಲ್‌ಎಲ್‌ಎಫ್ ಫೌಂಡೇಶನ್ ಅವರ ಸಂಯುಕ್ತ ಆಶ್ರಯದಲ್ಲಿ ಬೀದರ್ ಜಿಲ್ಲೆಯ ಹಳ್ಳಿಖೇಡ ಸರ್ಕಾರಿ ಆಸ್ಪತ್ರೆಯಲ್ಲಿ ಮಾನಸಿಕ ಸಾಮಾಜಿಕ ಶಿಕ್ಷಣ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀಮತಿ ರೂಪಾಲಿ ಸಾಲಗರೆ ಅವರು ಭಾಗವಹಿಸಿ ಮಾನಸಿಕ ಆರೋಗ್ಯದ ಮಹತ್ವ, ಮಾನಸಿಕ ಅಸ್ವಸ್ಥತೆಯ ಲಕ್ಷಣಗಳು, ಒತ್ತಡ ನಿರ್ವಹಣೆ, ನಿಯಮಿತ ಚಿಕಿತ್ಸೆ ಮತ್ತು ಕುಟುಂಬದ ಬೆಂಬಲದ ಕುರಿತು ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಯೋಗದ ಪ್ರದರ್ಶನ ನಡೆಸಿ, ಅದರ ಆರೋಗ್ಯಕರ ಮತ್ತು ಸಕಾರಾತ್ಮಕ ಪರಿಣಾಮಗಳ ಬಗ್ಗೆ ಅರಿವು ಮೂಡಿಸಲಾಯಿತು.



**"ಮಾನಸಿಕ ಆರೋಗ್ಯದ ಅರಿವು ಮತ್ತು ಸಮಯೋಚಿತ ಬೆಂಬಲವು ಉತ್ತಮ ಜೀವನದತ್ತ ದಾರಿ ತೋರಿಸುತ್ತದೆ."**

## ಒತ್ತಡ ನಿರ್ವಹಣೆ ಮತ್ತು ಮಾನಸಿಕ ಆರೋಗ್ಯ ಕುರಿತು ತರಬೇತಿ

27 ಮೇ 2026 ರಂದು ಆರ್ಬಿಟ್ ಸಂಸ್ಥೆ ಹಾಗೂ ಎಲ್‌ಎಲ್‌ಎಲ್‌ಎಫ್ ಸಂಯುಕ್ತ ಸಹಯೋಗದಲ್ಲಿ ಬೀದರ್ ಜಿಲ್ಲೆಯ ಹುಲಸೂರು ತಾಲೂಕಿನ ಗೋರ್ಟಾ ಬಿ ಗ್ರಾಮದಲ್ಲಿ ಮಾನಸಿಕ ಸಾಮಾಜಿಕ ಶಿಕ್ಷಣ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಶ್ರೀಮತಿ ರೂಪಾಲಿ ಸಾಲಗರೆ ಅವರು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ಮಾನಸಿಕ ಆರೋಗ್ಯ, ಅಸ್ವಸ್ಥತೆಯ ಲಕ್ಷಣಗಳು, ಒತ್ತಡ ನಿರ್ವಹಣೆ ಹಾಗೂ ಚಿಕಿತ್ಸೆ的 重 要 ತೆ ಕುರಿತು ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಯೋಗ ಪ್ರದರ್ಶನ ನಡೆಸಿ, ದೈಹಿಕ ಮತ್ತು ಮಾನಸಿಕ ಆರೋಗ್ಯದ ಮೇಲೆ ಅದರ ಪ್ರಯೋಜನಗಳ ಕುರಿತು ಅರಿವು ಮೂಡಿಸಲಾಯಿತು.



# ಮಾನಸಿಕ ಅಸ್ವಸ್ಥರ ಆರೈಕೆದಾರರ ಗುಂಪು ಸಭೆ

26 ಮೇ 2026 ರಂದು ಔರಾದ್ ತಾಲೂಕಿನ ಶೇಂಬೆಳ್ಳಿ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ಎಲ್‌ಎಲ್‌ಎಲ್‌ಎಫ್ ಸಂಯುಕ್ತ ಆಶ್ರಯದಲ್ಲಿ ಆರೈಕೆದಾರರ ಗುಂಪು ಸಭೆಯನ್ನು ಆಯೋಜಿಸಲಾಯಿತು. ಸಭೆಯನ್ನು ಯೋಹಾನ ಅವರು ನಡೆಸಿಕೊಟ್ಟರು. ಸಭೆಯಲ್ಲಿ ಒಟ್ಟು 7 ಆರೈಕೆದಾರರು ಭಾಗವಹಿಸಿದರು. ಮಾನಸಿಕ ಅಸ್ವಸ್ಥರ ಆರೈಕೆ, ನಿಯಮಿತ ಔಷಧ ಸೇವನೆ, ಕುಟುಂಬದ ಸಹಕಾರ ಹಾಗೂ ವೈಯಕ್ತಿಕ ಸ್ವಚ್ಛತೆಯ ಮಹತ್ವ ಕುರಿತು ಚರ್ಚಿಸಲಾಯಿತು. ಭಾಗವಹಿಸಿದವರು ತಮ್ಮ ಅನುಭವಗಳನ್ನು ಹಂಚಿಕೊಂಡು ಆರೈಕೆಯಲ್ಲಿ ಎದುರಾಗುವ ಸಮಸ್ಯೆಗಳ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಿದರು. ಮಾನಸಿಕ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸುವುದು ಹಾಗೂ ರೋಗಿಗಳಿಗೆ ಪ್ರೀತಿ ಮತ್ತು ಸಹಾನುಭೂತಿಯಿಂದ ನಡೆದುಕೊಳ್ಳುವ ಅಗತ್ಯತೆಯನ್ನು ತಿಳಿಸಲಾಯಿತು.

**"ಸಹಾನುಭೂತಿ, ನಿಯಮಿತ ಆರೈಕೆ ಮತ್ತು ಕುಟುಂಬದ ಬೆಂಬಲವೇ ಉತ್ತಮ ಆರೈಕೆಯ ಅಡಿಪಾಯ."**




# ಮಾನಸಿಕ ಅಸ್ವಸ್ಥರ ಮಹಾಲಕ್ಷ್ಮಿ ಆರೈಕೆದಾರರ ಗುಂಪಿನ ಸಭೆ



**"ನಿಯಮಿತ ಔಷಧ ಸೇವನೆ ಮತ್ತು ಪ್ರೀತಿಪೂರ್ಣ ಆರೈಕೆವೇ ಉತ್ತಮ ಆರೋಗ್ಯದ ಮೂಲಭೂತ ಅಂಶಗಳು."**

20 ಮೇ 2026 ರಂದು ಭಾಲ್ಕಿ ತಾಲೂಕಿನ ಚಿಟ್ಟಾ ಗ್ರಾಮದಲ್ಲಿ ಮಹಾಲಕ್ಷ್ಮಿ ಆರೈಕೆದಾರರ ಗುಂಪಿನ ಸಭೆಯನ್ನು ಆರ್ಬಿಟ್ ಸಂಸ್ಥೆ ಹಾಗೂ ಎಲ್‌ಎಲ್‌ಎಲ್‌ಎಫ್ ಆಶ್ರಯದಲ್ಲಿ ಆಯೋಜಿಸಲಾಯಿತು. ಕಾರ್ಯಕ್ರಮವನ್ನು ಕಾರ್ಯಕರ್ತ ಶ್ರೀ ಪ್ರಕಾಶ್ ಅವರು ನಡೆಸಿಕೊಟ್ಟರು. ಸಭೆಯಲ್ಲಿ ಶ್ರೀ ಮೊಗಲಪ್ಪ ಅವರನ್ನು ಅಧ್ಯಕ್ಷರಾಗಿ ಆಯ್ಕೆ ಮಾಡಲಾಯಿತು. ಫಲಾನುಭವಿಗಳಿಗೆ ನಿಯಮಿತವಾಗಿ ಔಷಧಿಗಳನ್ನು ನೀಡುವುದು, ಆರೋಗ್ಯದ ಮೇಲೆ ಹೆಚ್ಚಿನ ಗಮನ ಹರಿಸುವುದು ಹಾಗೂ ಔಷಧ ಸೇವನೆಯನ್ನು ತಪ್ಪಿಸಿದರೆ ಉಂಟಾಗುವ ಸಮಸ್ಯೆಗಳ ಕುರಿತು ಮಾಹಿತಿ ನೀಡಲಾಯಿತು. ಫಲಾನುಭವಿಗಳನ್ನು ಪ್ರೀತಿಯಿಂದ ಆರೈಕೆ ಮಾಡುವುದು, ದಿನನಿತ್ಯದ ಚಟುವಟಿಕೆಗಳನ್ನು ಸರಿಯಾಗಿ ಮಾಡಿಸುವುದು ಮತ್ತು ಡಿಎಮ್‌ಎಚ್‌ಪಿ (DMHP) ಕ್ಯಾಂಪ್‌ಗೆ ಹಾಜರಾಗುವ ಅಗತ್ಯತೆಯ ಕುರಿತು ತಿಳಿಸಲಾಯಿತು. ಸಭೆಯಲ್ಲಿ ಒಟ್ಟು 6 ಜನರು ಭಾಗವಹಿಸಿದ್ದರು.

# ಯಶೋಗಾಥೆ: ಆರಂಭಿಕ ಹಸ್ತಕ್ಷೇಪದಿಂದ ಸುಮಿತ್‌ನ ಬದುಕಿನಲ್ಲಿ ಹೊಸ ಬೆಳಕು



**ಯಶೋಗಾಥೆ:** ಆರಂಭಿಕ ಹಸ್ತಕ್ಷೇಪದಿಂದ ಸುಮಿತ್‌ನ ಬದುಕಿನಲ್ಲಿ ಹೊಸ ಬೆಳಕು
**ಮಗುವಿನ ಹೆಸರು:** ಸುಮಿತ್
**ವಯಸ್ಸು:** 6 ವರ್ಷ
**ಸ್ಥಳ:** ಇಂದ್ರನಗರ, ಬೀದರ್
**ವೈಕಲ್ಯದ ಸ್ವರೂಪ:** ನಡೆಯುವಿಕೆ ಮತ್ತು ಮಾತಿನ ಬೆಳವಣಿಗೆಯಲ್ಲಿ ವಿಳಂಬ

## ಹಿನ್ನೆಲೆ

ಸುಮಿತ್ ತನ್ನ ಪೋಷಕರ ಏಕೈಕ ಮಗ. ಜನನದ ನಂತರ ಕೆಲವು ಆರೋಗ್ಯ ಸಮಸ್ಯೆಗಳ ಕಾರಣದಿಂದ ಮಗುವಿನ ಬೆಳವಣಿಗೆಯಲ್ಲಿ ವಿಳಂಬ ಕಂಡುಬಂದಿತು. ಮಗು ಸ್ವತಂತ್ರವಾಗಿ ನಡೆಯಲು ಸಾಧ್ಯವಾಗುತ್ತಿರಲಿಲ್ಲ, ಸ್ಪಷ್ಟವಾಗಿ ಮಾತನಾಡುತ್ತಿರಲಿಲ್ಲ ಹಾಗೂ ಇತರರೊಂದಿಗೆ ಬೆರೆಯುವಲ್ಲಿ ತೊಂದರೆ ಅನುಭವಿಸುತ್ತಿತ್ತು. ಶಬ್ದಗಳಿಗೆ ಸರಿಯಾಗಿ ಪ್ರತಿಕ್ರಿಯಿಸದೆ, ಆಟ ಮತ್ತು ಸಾಮಾಜಿಕ ಚಟುವಟಿಕೆಗಳಲ್ಲಿಯೂ ಆಸಕ್ತಿ ಕಡಿಮೆಯಾಗಿತ್ತು.

## ಕೈಗೊಂಡ ಹಸ್ತಕ್ಷೇಪ

ಆರ್ಬಿಟ್ ಮತ್ತು ಎಪಿಡಿ ಸಂಸ್ಥೆಯ ಕಾರ್ಯಕರ್ತರು ಮಗುವನ್ನು ಗುರುತಿಸಿ ಮೌಲ್ಯಮಾಪನ ನಡೆಸಿದರು. ನಂತರ ವೈದ್ಯಕೀಯ ಚಿಕಿತ್ಸೆ, ಪೌಷ್ಟಿಕಾಂಶ ಬೆಂಬಲ ಹಾಗೂ ಕೇಂದ್ರ ಆಧಾರಿತ ಚಟುವಟಿಕೆಗಳಿಗೆ ಸಂಪರ್ಕ ಕಲ್ಪಿಸಲಾಯಿತು. ಮಗುವಿಗೆ ನಡೆಯುವ ತರಬೇತಿ, ಕೈಯಲ್ಲಿ ವಸ್ತುಗಳನ್ನು ಹಿಡಿಯುವ ಚಟುವಟಿಕೆಗಳು, ಶಬ್ದ ಗುರುತಿಸುವಿಕೆ, ಸರಳ ಪದಗಳ ಉಚ್ಚಾರಣೆ ಹಾಗೂ ಇತರ ಮಕ್ಕಳೊಂದಿಗೆ ಬೆರೆಯುವ ಚಟುವಟಿಕೆಗಳನ್ನು ನಿಯಮಿತವಾಗಿ ನಡೆಸಲಾಯಿತು. ಪೋಷಕರಿಗೂ ಮನೆಯಲ್ಲಿ ನಿರಂತರವಾಗಿ ಈ ಚಟುವಟಿಕೆಗಳನ್ನು ಮಾಡಿಸಲು ಮಾರ್ಗದರ್ಶನ ನೀಡಲಾಯಿತು.

## ಕಂಡುಬಂದ ಬದಲಾವಣೆ

ನಿರಂತರ ತರಬೇತಿ ಮತ್ತು ಪೋಷಕರ ಸಹಕಾರದ ಫಲವಾಗಿ ಸುಮಿತ್‌ನಲ್ಲಿ ಗಮನಾರ್ಹ ಬದಲಾವಣೆ ಕಂಡುಬಂದಿದೆ. ಇಂದು ಮಗು ಯಾರ ಸಹಾಯವಿಲ್ಲದೆ ಸ್ವತಂತ್ರವಾಗಿ ನಡೆಯುತ್ತಿದೆ. ತನ್ನ ಹೆಸರಿಗೆ ಪ್ರತಿಕ್ರಿಯಿಸುತ್ತಿದ್ದು, "ಅಮ್ಮ", "ಅಪ್ಪ" ಮುಂತಾದ ಸರಳ ಪದಗಳನ್ನು ಮಾತನಾಡುತ್ತಿದೆ. ಶಬ್ದಗಳನ್ನು ಗುರುತಿಸಿ ಪ್ರತಿಕ್ರಿಯಿಸುತ್ತಿದ್ದು, ಆಟಿಕೆಗಳನ್ನು ಬಳಸಿಕೊಂಡು ಆಟವಾಡುತ್ತಿದೆ ಹಾಗೂ ಇತರ ಮಕ್ಕಳೊಂದಿಗೆ ಬೆರೆತು ಸಂತೋಷದಿಂದ ಭಾಗವಹಿಸುತ್ತಿದೆ.

## ಫಲಿತಾಂಶ

ಸುಮಿತ್‌ನ ಈ ಪ್ರಗತಿಯು ಆರಂಭಿಕ ಹಸ್ತಕ್ಷೇಪ, ನಿರಂತರ ತರಬೇತಿ ಮತ್ತು ಪೋಷಕರ ಸಕ್ರಿಯ ಭಾಗವಹಿಸುವಿಕೆಯ ಮಹತ್ವವನ್ನು ತೋರಿಸುತ್ತದೆ. ಮಗುವಿನಲ್ಲಾದ ಈ ಸಕಾರಾತ್ಮಕ ಬದಲಾವಣೆಯಿಂದ ಪೋಷಕರು ಮತ್ತು ಅಂಗನವಾಡಿ ಕಾರ್ಯಕರ್ತರು ಸಂತಸ ವ್ಯಕ್ತಪಡಿಸಿ ಆರ್ಬಿಟ್ ಹಾಗೂ ಎಪಿಡಿ ಸಂಸ್ಥೆಗಳಿಗೆ ಕೃತಜ್ಞತೆ ಸಲ್ಲಿಸಿದ್ದಾರೆ.

## ಮುಖ್ಯ ಸಂದೇಶ

"ಸರಿಯಾದ ಸಮಯದಲ್ಲಿ ಗುರುತಿಸುವಿಕೆ, ಸೂಕ್ತ ಹಸ್ತಕ್ಷೇಪ ಮತ್ತು ಪೋಷಕರ ಬೆಂಬಲವು ಮಗುವಿನ ಜೀವನದಲ್ಲಿ ಮಹತ್ತರ ಬದಲಾವಣೆ ತರಬಲ್ಲದು."

# ಯಶೋಗಾಥೆ: ಕುರಿ ಸಾಕಾಣಿಕೆಯಿಂದ ಆರ್ಥಿಕ ಸುಧಾರಣೆ ಕಂಡ ನಾಗಮ್ಮ



**ಹೆಸರು:** ಶ್ರೀಮತಿ ನಾಗಮ್ಮ
**ತಾಲೂಕು:** ಚಿಟಗುಪ್ಪ
**ಜಿಲ್ಲೆ:** ಬೀದರ್
**ಸ್ವ-ಸಹಾಯ ಸಂಘ:** ಭವಾನಿಮಾತಾ ಸಂಘ

**ಹಿನ್ನೆಲೆ**
ಶ್ರೀಮತಿ ನಾಗಮ್ಮ ಅವರು ಚಿಟಗುಪ್ಪದ ನಿವಾಸಿಯಾಗಿದ್ದು, ನಾಲ್ಕು ಮಕ್ಕಳ ತಾಯಿಯಾಗಿದ್ದಾರೆ. ಕುಟುಂಬದ ಮುಖ್ಯ ಆದಾಯ ಮೂಲ ಕೂಲಿ ಕೆಲಸವಾಗಿದ್ದು, ಕಚ್ಚಾ ಮನೆಯಲ್ಲಿ ವಾಸಿಸುತ್ತಿದ್ದರು. ಬಿಪಿಎಲ್ ಕಾರ್ಡ್ ಹೊಂದಿರುವ ಈ ಕುಟುಂಬಕ್ಕೆ ಕೇವಲ ಕೂಲಿ ಕೆಲಸದಿಂದ ಜೀವನ ನಿರ್ವಹಿಸುವುದು ಕಷ್ಟಕರವಾಗಿತ್ತು.

**ಕೈಗೊಂಡ ಕ್ರಮ**
ಆರ್ಬಿಟ್ ಸಂಸ್ಥೆಯ ಮಾರ್ಗದರ್ಶನದಲ್ಲಿ ಭವಾನಿಮಾತಾ ಸ್ವ-ಸಹಾಯ ಸಂಘಕ್ಕೆ ಸೇರ್ಪಡೆಗೊಂಡು ವಿವಿಧ ತರಬೇತಿಗಳಲ್ಲಿ ಭಾಗವಹಿಸಿದರು. ಸ್ವ-ಉದ್ಯೋಗದ ಕುರಿತು ತರಬೇತಿ ಪಡೆದ ನಂತರ ಸಂಘದ ನೆರವಿನಿಂದ ಕುರಿ ಸಾಕಾಣಿಕೆಯನ್ನು ಆರಂಭಿಸಿದರು.

**ಬದಲಾವಣೆ ಮತ್ತು ಫಲಿತಾಂಶ**
ಪ್ರಸ್ತುತ ಅವರು ಯಶಸ್ವಿಯಾಗಿ ಕುರಿ ಸಾಕಾಣಿಕೆ ನಡೆಸುತ್ತಿದ್ದು, ಕುರಿಗಳು ಮರಿಹಾಕುತ್ತಿವೆ. ಒಂದು ಮರಿಯನ್ನು ₹5,000 ರಿಂದ ₹6,000 ವರೆಗೆ ಮಾರಾಟ ಮಾಡುವ ಮೂಲಕ ಹೆಚ್ಚುವರಿ ಆದಾಯ ಗಳಿಸುತ್ತಿದ್ದಾರೆ. ಇದರಿಂದ ಕುಟುಂಬದ ಆರ್ಥಿಕ ಸ್ಥಿತಿ ಸುಧಾರಿಸಿದ್ದು, ಸ್ವಾವಲಂಬಿ ಜೀವನದತ್ತ ಹೆಜ್ಜೆ ಇಟ್ಟಿದ್ದಾರೆ.

**ನಾಗಮ್ಮ ಅವರ ಮಾತು**
"ಆರ್ಬಿಟ್ ಸಂಸ್ಥೆಯ ಮಾರ್ಗದರ್ಶನ ಮತ್ತು ತರಬೇತಿಯಿಂದ ಸ್ವ-ಉದ್ಯೋಗ ಆರಂಭಿಸಲು ಸಾಧ್ಯವಾಯಿತು. ಇಂದು ಕುರಿ ಸಾಕಾಣಿಕೆಯಿಂದ ಉತ್ತಮ ಆದಾಯ ದೊರೆಯುತ್ತಿದ್ದು, ನಮ್ಮ ಕುಟುಂಬದ ಆರ್ಥಿಕ ಪರಿಸ್ಥಿತಿ ಸುಧಾರಿಸಿದೆ. ಇದಕ್ಕಾಗಿ ಸಂಸ್ಥೆಗೆ ಹೃತ್ಪೂರ್ವಕ ಧನ್ಯವಾದಗಳು."

**ಮುಖ್ಯ ಸಂದೇಶ**
"ಸರಿಯಾದ ಮಾರ್ಗದರ್ಶನ ಮತ್ತು ಸ್ವ-ಉದ್ಯೋಗದ ಅವಕಾಶಗಳು ಕುಟುಂಬಗಳ ಆರ್ಥಿಕ ಸಬಲೀಕರಣಕ್ಕೆ ದಾರಿ ಮಾಡಿಕೊಡುತ್ತವೆ."

## "ಪ್ರತಿ ಕುಟುಂಬದ ಅಭಿವೃದ್ಧಿ, ಪ್ರತಿ ಸಮುದಾಯದ ಸಬಲೀಕರಣ ನಮ್ಮ ಧ್ಯೇಯ."

## ಸೇವಾ ಸಂಗಮ ಸಂಸ್ಥೆ, ಕಲಬುರಗಿ

# ಸೇವಾವಾಣಿ

ಮಾಸಿಕ ಸುದ್ದಿಪತ್ರಿಕೆ - ಮೇ 2026

## "ಸಮುದಾಯದ ಅಭಿವೃದ್ಧಿ, ಸಬಲೀಕರಣ ಮತ್ತು ಪರಿವರ್ತನೆಯ ಪಯಣ"









@Sevasangama Kalaburagi | @sevasangama01 | www.sevasangama.in | Seva Sangama | 897 111 9914

# "ಬಾಲ್ಯ ವಿವಾಹ ತಡೆದು, ಮಕ್ಕಳ ಶಿಕ್ಷಣ ಮತ್ತು ಉಜ್ವಲ ಭವಿಷ್ಯವನ್ನು ಬೆಂಬಲಿಸೋಣ."

02 ಮೇ 2026 ರಂದು ಬೀದರ್ ತಾಲೂಕಿನ ಸುಲ್ತಾಪುರ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆಯ ನವಜೀವನ ಕಾರ್ಯಕ್ರಮದಡಿ ಮಾನಸಿಕ ಅಸ್ವಸ್ಥರ ಪಾಲಕ-ಪೋಷಕರ ಸಭೆಯನ್ನು ಆಯೋಜಿಸಲಾಯಿತು. ಸಭೆಯಲ್ಲಿ ಫಲಾನುಭವಿಗಳ ಆರೋಗ್ಯ ಸ್ಥಿತಿಯ ಕುರಿತು ಚರ್ಚಿಸಿ, ಆರೋಗ್ಯದ ಮಹತ್ವ ಹಾಗೂ ಆತ್ಮವಿಶ್ವಾಸದಿಂದ ಸಮಾಜದಲ್ಲಿ ಬದುಕುವ ಅಗತ್ಯತೆಯ ಬಗ್ಗೆ ಅರಿವು ಮೂಡಿಸಲಾಯಿತು. ನಿಯಮಿತವಾಗಿ ಔಷಧಿಗಳನ್ನು ಸೇವಿಸುವುದು, ದಿನನಿತ್ಯದ ಚಟುವಟಿಕೆಗಳನ್ನು ಸ್ವತಃ ನಿರ್ವಹಿಸಲು ಪ್ರೋತ್ಸಾಹಿಸುವುದು ಹಾಗೂ ಸರ್ಕಾರಿ ಸೌಲಭ್ಯಗಳು ಮತ್ತು ದಾಖಲೆಗಳ ಮಹತ್ವದ ಕುರಿತು ಮಾಹಿತಿ ನೀಡಲಾಯಿತು. ಯುಡಿಐಡಿ (UDID) ಕಾರ್ಡ್, ಮಾಸಾಶನ ಮತ್ತು ಗ್ರಾಮ ಪಂಚಾಯಿತಿಯ 5% ಅನುದಾನ ಸೇರಿದಂತೆ ವಿವಿಧ ಸೌಲಭ್ಯಗಳ ಕುರಿತು ಮಾರ್ಗದರ್ಶನ ನೀಡಲಾಯಿತು. ಸಭೆಯಲ್ಲಿ ಒಟ್ಟು 6 ಜನರು ಭಾಗವಹಿಸಿದ್ದರು.



## ಸಮೃದ್ಧಿ ಕಾರ್ಯಕ್ರಮ – ವಿಶ್ವಕರ್ಮ ಯೋಜನೆಯಿಂದ ಸ್ವಾವಲಂಬನೆ

22 ಮೇ 2026 ರಂದು ಕಲಬುರಗಿ ಜಿಲ್ಲೆಯ ಫರಹತಾಬಾದ್ ಗ್ರಾಮದಲ್ಲಿ ಸೇವಾಸಂಗಮ ಸಂಸ್ಥೆಯ ಮಹಿಳಾ ಸಬಲೀಕರಣ ಕಾರ್ಯಕ್ರಮದಡಿ ಜ್ಞಾನದೀಪ ಸಂಘದ ಸದಸ್ಯರಿಗೆ ವಿಶ್ವಕರ್ಮ ಯೋಜನೆ ಕುರಿತು ಮಾಹಿತಿ ನೀಡಲಾಯಿತು. ಯೋಜನೆಯಡಿ ಶ್ರೀಮತಿ ರಿಜ್ವಾನಾ ಅವರು ಗ್ರಾಮ ಪಂಚಾಯಿತಿಯಲ್ಲಿ ಅರ್ಜಿ ಸಲ್ಲಿಸಿ, ನಾಲ್ಕು ತಿಂಗಳ ನಂತರ ಹೊಲಿಗೆ ಯಂತ್ರವನ್ನು ಪಡೆದರು. ಪ್ರಸ್ತುತ ಅವರು ಹೊಲಿಗೆ ಮತ್ತು ಬಟ್ಟೆ ಇಸ್ತ್ರಿ ಸೇವೆಯ ಮೂಲಕ ಸ್ವ-ಉದ್ಯೋಗವನ್ನು ಯಶಸ್ವಿಯಾಗಿ ನಡೆಸುತ್ತಿದ್ದು, ತಿಂಗಳಿಗೆ ₹6,000 ರಿಂದ ₹7,000 ವರೆಗೆ ಆದಾಯ ಗಳಿಸುತ್ತಿದ್ದಾರೆ ಎಂದು ತಿಳಿಸಿದರು.

**"ಸರ್ಕಾರಿ ಯೋಜನೆಗಳ ಸದುಪಯೋಗ ಸ್ವಾವಲಂಬಿ ಬದುಕಿನತ್ತ ದಾರಿ ತೋರಿಸುತ್ತದೆ."**



## ದೈಹಿಕ ನ್ಯೂನತೆಗಳ ಕುರಿತು ಜಾಗೃತಿ ಕಾರ್ಯಕ್ರಮ

23 ಮೇ 2026 ರಂದು ಸೇವಾಸಂಗಮ ಸಂಸ್ಥೆ ಮತ್ತು ಅಜೀಂ ಪ್ರೇಮಜೀ ಫೌಂಡೇಶನ್ ಅವರ ಸಂಯುಕ್ತ ಸಹಯೋಗದಲ್ಲಿ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯಡಿ ರಾಮಜಿನಗರ ಅಂಗನವಾಡಿ ಕೇಂದ್ರ-2ರಲ್ಲಿ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದಲ್ಲಿ ಕುಮಾರಿ ಅನಿತಾ ಅವರು 0 ರಿಂದ 8 ವರ್ಷದೊಳಗಿನ ಬೆಳವಣಿಗೆಯಲ್ಲಿ ಕುಂಠಿತತೆ ಹೊಂದಿರುವ ಮಕ್ಕಳನ್ನು ಗುರುತಿಸುವ ವಿಧಾನ, ದೈಹಿಕ ನ್ಯೂನತೆಗಳ ಕಾರಣಗಳು ಹಾಗೂ ವಿವಿಧ ಅಂಗವೈಕಲ್ಯಗಳ ಕುರಿತು ಸಮಗ್ರ ಮಾಹಿತಿ ನೀಡಿದರು. ವಿಶೇಷವಾಗಿ 2016ರ ಅಂಗವಿಕಲರ ಹಕ್ಕುಗಳ ಕಾಯ್ದೆಯಡಿ ಗುರುತಿಸಲಾದ 21 ವಿಧದ ಅಂಗವೈಕಲ್ಯಗಳ ಬಗ್ಗೆ ಅರಿವು ಮೂಡಿಸಲಾಯಿತು. ಸೇವಾಸಂಗಮ ಸಂಸ್ಥೆಯ ಮೂಲಕ ವಿಶೇಷ ಅಗತ್ಯವಿರುವ ಮಕ್ಕಳಿಗೆ ಒದಗಿಸಲಾಗುವ ಸೇವೆಗಳು ಹಾಗೂ ಸರ್ಕಾರಿ ಸೌಲಭ್ಯಗಳ ಕುರಿತು ಮಾಹಿತಿ ನೀಡಲಾಯಿತು. ಕಾರ್ಯಕ್ರಮದಲ್ಲಿ ಒಂದು ಮಗುವನ್ನು ಗುರುತಿಸಲಾಗಿದ್ದು, ಅಂಗನವಾಡಿ ಕಾರ್ಯಕರ್ತೆ ಶ್ರೀಮತಿ ಪುಷ್ಪ, ಆಶಾ ಕಾರ್ಯಕರ್ತೆ ಮಧು ಹಾಗೂ 13 ಜನರು ಭಾಗವಹಿಸಿದ್ದರು.



# "ಮಕ್ಕಳನ್ನು ಶೀಘ್ರವಾಗಿ ಗುರುತಿಸಿ, ಸೂಕ್ತ ಸೇವೆಗಳಿಗೆ ಸಂಪರ್ಕಿಸುವುದು ಅವರ ಉಜ್ವಲ ಭವಿಷ್ಯದ ಮೊದಲ ಹೆಜ್ಜೆಯಾಗಿದೆ."

## ಕೇಂದ್ರ ಆಧಾರಿತ ಮಕ್ಕಳ ಅಭಿವೃದ್ಧಿ ಚಟುವಟಿಕೆ

27 ಮೇ 2026 ರಂದು ಕಲಬುರಗಿ ನಗರ ಪ್ರದೇಶದ ಚೇತನ ಕೇಂದ್ರದಲ್ಲಿ ಸೇವಾಸಂಗಮ ಸಂಸ್ಥೆ ಹಾಗೂ ಅಜೀಂ ಪ್ರೇಮಜೀ ಫೌಂಡೇಶನ್ ಅವರ ಸಂಯುಕ್ತ ಸಹಯೋಗದಲ್ಲಿ 0 ರಿಂದ 8 ವರ್ಷದೊಳಗಿನ ಬೆಳವಣಿಗೆಯಲ್ಲಿ ಕುಂಠಿತತೆ ಹೊಂದಿರುವ ಮಗುವಿಗೆ ವಿವಿಧ ಅಭಿವೃದ್ಧಿ ಚಟುವಟಿಕೆಗಳನ್ನು ನಡೆಸಲಾಯಿತು. ಕಾರ್ಯಕ್ರಮದಲ್ಲಿ ಪ್ರಾಣಿಗಳ ಚಿತ್ರಗಳನ್ನು ಗುರುತಿಸುವುದು, ವಿವಿಧ ವಾಹನಗಳನ್ನು ಗುರುತಿಸುವುದು ಹಾಗೂ ಬೆರಳುಗಳ ಎಣಿಕೆಯಂತಹ ಚಟುವಟಿಕೆಗಳ ಮೂಲಕ ಮಗುವಿನ ಜ್ಞಾನಾತ್ಮಕ ಮತ್ತು ಸಂವಹನ ಕೌಶಲ್ಯಗಳನ್ನು ಉತ್ತೇಜಿಸಲಾಯಿತು. ಮಗುವಿನಲ್ಲಿ ಆತ್ಮವಿಶ್ವಾಸ ಮತ್ತು ಸ್ವಾವಲಂಬನೆ ಬೆಳೆಸುವ ಉದ್ದೇಶದಿಂದ ಪೋಷಕರ ಸಹಾಯವಿಲ್ಲದೆ ಸ್ವತಂತ್ರವಾಗಿ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಪ್ರೋತ್ಸಾಹಿಸಲಾಯಿತು. ಸೇವಾಸಂಗಮ ಸಂಸ್ಥೆಯ ಕಾರ್ಯಕರ್ತ ಶಿವಕಾಂತ ಹಾಗೂ ಅರ್ಲಿ ಇಂಟರ್ವೆನ್ಷನ್ ಕಾರ್ಯಕ್ರಮದ ವ್ಯವಸ್ಥಾಪಕಿ ಶ್ರೀಮತಿ ಶ್ವೇತಾ ಅವರು ವಿವಿಧ ಚಟುವಟಿಕೆಗಳನ್ನು ನಡೆಸಿಕೊಟ್ಟರು.



**"ಆಟ ಮತ್ತು ಚಟುವಟಿಕೆಗಳ ಮೂಲಕ ಮಕ್ಕಳ ಕಲಿಕೆ ಹಾಗೂ ಬೆಳವಣಿಗೆಯನ್ನು ಪರಿಣಾಮಕಾರಿಯಾಗಿ ಉತ್ತೇಜಿಸಬಹುದು."**

## ಕೇಂದ್ರ ಆಧಾರಿತ ಮಕ್ಕಳ ಅಭಿವೃದ್ಧಿ ಚಟುವಟಿಕೆ

23 ಮೇ 2026 ರಂದು ಕಲಬುರಗಿ ನಗರದ ಆರ್ಯನಗರ ಅಂಗನವಾಡಿ ಕೇಂದ್ರದಲ್ಲಿ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆ ಕುರಿತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದಲ್ಲಿ 0 ರಿಂದ 8 ವರ್ಷದೊಳಗಿನ ಮಕ್ಕಳ ಬೆಳವಣಿಗೆಯ ಹಂತಗಳ ಕುರಿತು ಮಾಹಿತಿ ನೀಡಲಾಯಿತು. ಮಗುವಿನ ಬೆಳವಣಿಗೆಯಲ್ಲಿ ಕತ್ತು ನಿಲ್ಲುವುದು, ಕುಳಿತುಕೊಳ್ಳುವುದು, ಮಾತನಾಡುವುದು ಹಾಗೂ ಇತರರೊಂದಿಗೆ ಸಾಮಾಜಿಕವಾಗಿ ಬೆರೆಯುವಂತಹ ಪ್ರಮುಖ ಬೆಳವಣಿಗೆಯ ಹಂತಗಳನ್ನು ವಿವರಿಸಲಾಯಿತು. ಈ ಬೆಳವಣಿಗೆಯ ಹಂತಗಳು ನಿರೀಕ್ಷಿತ ಸಮಯದಲ್ಲಿ ಕಂಡುಬರದಿದ್ದಲ್ಲಿ ಮಗುವನ್ನು ಬೆಳವಣಿಗೆಯಲ್ಲಿ ಕುಂಠಿತತೆ ಹೊಂದಿರುವ ಮಗು ಎಂದು ಗುರುತಿಸಬಹುದೆಂದು ಶ್ರೀಮತಿ ಶಂಕ್ರಮ್ಮ ಅವರು ತಿಳಿಸಿದರು. ಕಾರ್ಯಕ್ರಮದಲ್ಲಿ 11 ಜನರಿಗೆ ಅರಿವು ಮೂಡಿಸಲಾಯಿತು.



**"ಆಟ ಮತ್ತು ಚಟುವಟಿಕೆಗಳ ಮೂಲಕ ಮಕ್ಕಳ ಕಲಿಕೆ ಹಾಗೂ ಬೆಳವಣಿಗೆಯನ್ನು ಪರಿಣಾಮಕಾರಿಯಾಗಿ ಉತ್ತೇಜಿಸಬಹುದು."**

# ಧನ್ಯವಾದಗಳು

ನಮ್ಮ ಎಲ್ಲಾ ಫಲಾನುಭವಿಗಳು, ಸಮುದಾಯದ ಸದಸ್ಯರು, ಸ್ವ-ಸಹಾಯ ಸಂಘಗಳು, ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು, ಸರ್ಕಾರಿ ಇಲಾಖೆಗಳು ಹಾಗೂ ನಮ್ಮ ಅಭಿವೃದ್ಧಿ ಪಾಲುದಾರರಿಗೆ ಹೃತ್ಪೂರ್ವಕ ಕೃತಜ್ಞತೆಗಳು.


ORBIT NGO
Non-Governmental Organization
Humnaabad, Karnataka
ORBIT
Organization of Bidar Integral Transformation
Together, we can
CREATE A
BETTER TOMORROW
Your support helps us empower lives, build communities & bring hope.
SCAN THIS QR CODE
TO DONATE
EMPOWER LIVES
BUILD COMMUNITIES
SUPPORT EDUCATION
CREATE HOPE
Your Small Act Can Make a Big Difference
Visit Our Website
www.orbitbidar.in
OUR MISSION
To bring positive and integral transformation in communities through education, empowerment, and sustainable development.
Humnaabad, Bidar District
Karnataka, India
Contact Us
8880843038

# SEVA SANGAMA

Organization for Social Concern Development





## Scan this QR Code TO DONATE

**TOGETHER WE CAN**

- SUPPORT EDUCATION
- EMPOWER COMMUNITIES
- IMPROVE LIVELIHOODS
- BUILD A BETTER SOCIETY

*Your Support Creates a Better Tomorrow*

Visit Our Website
**www.sevasangama.in**

“ **Small Act. Big Impact.**
Be the reason someone smiles today.

Together for Compassion
Together for Change
Together for a Better Future

Contact Us
8971119914

Follow Us

# Stay Connected.

# BE THE CHANGE.

**Follow Us. Support Us. Transform Lives.**

Together, we can build a stronger, kinder and empowered society.
Connect with us, follow our journey and be a part of the change.
Your support today creates a **better tomorrow**.

## ORBIT

Organization of
Bidar Integral Transformation

Bidar

**FOLLOW US ON**

- Facebook: @Orbit Bidar- Organization of Bidar Integral Transformation- NGO
- Instagram: @Orbitbidar
- Website: www.orbitbidar.in
- YouTube: @orbithumnabad

**GET IN TOUCH**

For Collaborations, Volunteering, Donations & More.

*Let's create impact together!*

## SEVA SANGAMA

Development Society, Kalaburagi

**FOLLOW US ON**

- Facebook: @Sevasangama Kalaburagi Non-Government Organization
- Instagram: @sevasangama01
- Website: www.sevasangama.in
- Phone: 897 111 9914

**GET IN TOUCH**

For Collaborations, Volunteering, Donations & More.

*Let's create impact together!*

## BE A PART OF SOMETHING BIGGER!

- Follow our journey
- Support our cause
- Share our mission
- Spread the word
- Make a difference

*Small Actions, Big Impact.*

## TOGETHER WE CAN...

- Empower Lives
- Build Strong Communities
- Create Opportunities
- Inspire Change
- Transform Futures

# ಸೇವಾ ಸಂಗಮ ಮತ್ತು ಆರ್ಬಿಟ್ ಸಂಸ್ಥೆ
# ಧರ್ಮಕ್ಷೇತ್ರ ಗುಲ್ಬರ್ಗಾ

## Appeal

ಗುಲ್ಬರ್ಗಾ ಧರ್ಮ ಕ್ಷೇತ್ರವು ಉತ್ತರ ಕರ್ನಾಟಕದ ಹಿಂದುಳಿದ ಜಿಲ್ಲೆಗಳಾದ ಬೀದರ್, ಬಿಜಾಪುರ್, ಯಾದಗಿರಿ ಹಾಗೂ ಗುಲ್ಬರ್ಗಾ ಜಿಲ್ಲೆಗಳನ್ನು ಒಳಗೊಂಡಿದೆ. ಗುಲ್ಬರ್ಗಾ ಧರ್ಮಕ್ಷೇತ್ರವು ಉಗಮ ಆಗುವುದಕ್ಕಿಂತ ಮುಂಚೆ ಮಂಗಳೂರು ಧರ್ಮಕ್ಷೇತ್ರದಿಂದ ಗುರುಗಳು ಹಾಗೂ ಕನ್ಯಾ ಭಗಿನಿಯರು ಬೀದರ್ ಜಿಲ್ಲೆಯ ಸರ್ವತೋಮುಖ ಬೆಳವಣಿಗೆಗಾಗಿ ಶ್ರಮಿಸಿದ್ದಾರೆ. ಆರ್ಬಿಟ್ ಸಮಾಜ ಸೇವಾ ಸಂಸ್ಥೆಯ ಮುಖಾಂತರ 1993 ರಿಂದ ಆರೋಗ್ಯ, ಶಿಕ್ಷಣ, ಮಹಿಳಾ ಸಬಲೀಕರಣ, ಅಂಗವಿಕಲರ ಸಬಲೀಕರಣ ಹಾಗೂ ನಿರ್ಗತಿಕರಿಗೆ ಆಸರೆ ಒದಗಿಸುವ ಕೆಲಸವನ್ನು ಮಾಡಿದ್ದಾರೆ. ಹಾಗೆ 2005ನೇ ಇಸವಿಯಲ್ಲಿ ಗುಲ್ಬರ್ಗಾ ಧರ್ಮಕ್ಷೇತ್ರ ಉಗಮವಾದಾಗಿನಿಂದ ಈ ಸಮಾಜ ಸೇವಾ ಕೆಲಸವನ್ನು ನಾಲ್ಕು ಜಿಲ್ಲೆಗಳಲ್ಲಿ ಕೈಗೊಳ್ಳಲಾಯಿತು. ಸೇವಾ ಸಂಗಮ ಹಾಗೂ ಆರ್ಬಿಟ್ ಸಂಸ್ಥೆಗಳ ಮುಖಾಂತರ ಮಹಿಳಾ ಸಬಲೀಕರಣ, ಮಕ್ಕಳ ಶಿಕ್ಷಣ, ಅಂಗವಿಕಲರ ಕಾರ್ಯಕ್ರಮ, ಪರಿಸರ ಸಂರಕ್ಷಣೆ, ನಿರುದ್ಯೋಗಿಗಳಿಗೆ ಕೌಶಲ್ಯ ತರಬೇತಿ, ಮಾನಸಿಕ ಅಸ್ವಸ್ಥರಿಗೆ ಪುನರ್ವಸತಿ, ಎಂಟು ವರ್ಷಕ್ಕಿಂತ ಕೆಳಗಿನ ಬೆಳವಣಿಗೆಯಲ್ಲಿ ಕುಂಠಿತ ಹೊಂದಿದ ಮಕ್ಕಳಿಗೆ ಚಿಕಿತ್ಸೆ, ನೈಸರ್ಗಿಕ ವಿಪತ್ತು ನಿವಾರಣೆ, ಕ್ಯಾನ್ಸರ್ ಜಾಗೃತಿ ಆಂದೋಲನ, ಹೀಗೆ ಸಮಾಜದಿಂದ ಹಂಚಿಕೆ ತಳ್ಳಲ್ಪಟ್ಟ ಜನರಿಗೆ ಪುರ್ನವಸತಿ ನೀಡುವ ಕೆಲಸವನ್ನು ಈ ಎರಡು ಸಂಸ್ಥೆಗಳು ಮಾಡುತ್ತಿವೆ. ಹಲವಾರು ಕಾರ್ಯಕ್ರಮಗಳ ಮುಖಾಂತರ ನಮ್ಮ ಎರಡು ಸಂಸ್ಥೆಗಳು ಬಡವರಿಗೆ, ನಿರ್ಗತಿಕರಿಗೆ, ಶೋಷಿತರಿಗೆ, ಹಾಗೂ ವಿವಿಧ ಶೋಷಣೆಗಳಿಗೆ ಒಳಗಾದ ಜನರಿಗೆ ಸ್ಫೂರ್ತಿ, ಶಕ್ತಿ, ಹಾಗೂ ಜೀವವನ್ನು ತುಂಬುತ್ತವೆ. ಈ ಸೇವೆಗಳನ್ನು ಹೆಚ್ಚು ಜನರಿಗೆ ತಲುಪಿಸಲು, ನಿಮ್ಮ ಸಹಾಯ ಹಸ್ತವನ್ನು ಹಾಗೂ ನಮ್ಮೊಂದಿಗೆ ಸೇರಿ ಸುಂದರ ಸಮಾಜವನ್ನು ಕಟ್ಟಲು ನಿಮ್ಮ ನೆರವನ್ನು ಅಪೇಕ್ಷಿಸುತ್ತೇವೆ. ಬನ್ನಿ ಉತ್ತಮ ಸಮಾಜವನ್ನು ಕಟ್ಟೋಣ.



**TO DONATE, SCAN THE QR CODE**

SCAN & DONATE

ನಿಮ್ಮ ಸಹಾಯದಿಂದ ಗುಲ್ಬರ್ಗಾ ಹಾಗೂ ಬೀದರ, ಕೋಳಗೇರಿ ನಿವಾಸ ಮಕ್ಕಳು ಉತ್ತಮ ಶಿಕ್ಷಣ ಪಡೆಯುತ್ತಾರೆ.

ನಿಮ್ಮ ಸಹಾಯದಿಂದ ವಿಶೇಷ ಚೇತನ ಮಕ್ಕಳು ತಮ್ಮ ಸಾಮರ್ಥ್ಯ ಹಾಗೂ ಕೌಶಲ್ಯಗಳು ಕಂಡುಕೊಳ್ಳುತ್ತಾರೆ.

ಪ್ರಾಯೋಜಕರು ಒಂದು ಟ್ಯೂಷನ್ ಸೇಂಟರ್ ಪ್ರತಿ ತಿಂಗಳು 4000/- ವರ್ಷಕ್ಕೆ 40,000/-

ಪ್ರಾಯೋಜಕರು ಒಂದು ಮಗು ರೂ.500 ಪ್ರತಿ ತಿಂಗಳು / ವರ್ಷಕ್ಕೆ 6000/-

ನೀವು ಧನ ಸಹಾಯ ಮಾಡಿದ ಮೇಲೆ ನಿಮ್ಮ ವಿಳಾಸ ಮತ್ತು PAN number ಕೆಳಗಿರುವ ಸಂಖ್ಯೆಗೆ WhatsApp ಮಾಡುವುದು.

(Only for Indian Citizens)

**Bank Account Details**

DONATE

| | | |
|---|---|---|
| Name | : | Sevasangama Development Society |
| Account No | : | 16040100022902 |
| IFSC Code | : | FDRL0001604 |
| Bank | : | Federal Bank |
| Branch | : | Super Market Kalaburagi |


**Address**

Seva Sangama Development Society,
Near Kendriya Vidyalaya,
Kotnoor D, Kalaburagi, Karnataka-585102

Contact
8660968063
9743112739

Email
sevasangama2006@gmail.com

Fr. Victor Anil Vas
Director, Seva Sangama & ORBIT


Visit Us: www.sevasangama.in